I/281651/2022

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ/13/ಸಿಸಿಟೆಕ್/2022(807409)

ಆಯುಕ್ತರ ಕಛೇರಿ
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ
ಬೆಂಗಳೂರು-560001, ದಿ:07-07-2022

**-: ಸುತ್ತೋಲೆ :-**

ವಿಷಯ: ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಶಿರಾಳಕೊಪ್ಪ ಸಂಸ್ಥೆಯ ಸಿ.ಸಿ.ಟೆಕ್ ಉಪಘಟಕದಿಂದ "Educational Excellence through Advanced Pedagogy" ಎಂಬ ವಿಷಯದ ಬಗ್ಗೆ ಒಂದು ವಾರದ ಆನ್‌ಲೈನ್ ಅಲ್ಪಾವಧಿ ತರಬೇತಿ ನಡೆಸುವ ಬಗ್ಗೆ.

ಉಲ್ಲೇಖ: ಪ್ರಾಚಾರ್ಯರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಶಿರಾಳಕೊಪ್ಪ ಇವರ ಕಛೇರಿ ಪತ್ರ ಸಂಖ್ಯೆ: ಸಮಪಾಶಿ/42/ಸಿಸಿಟೆಕ್/ತರಬೇತಿ/2021-22/89 ದಿನಾಂಕ:28-06-2022.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಪತ್ರದನ್ವಯ, ರಾಜ್ಯದ ವಿವಿಧ ಪಾಲಿಟೆಕ್ನಿಕ್‌ಗಳ ಎಲ್ಲಾ ವಿಭಾಗದ ಉಪನ್ಯಾಸಕರಿಗಾಗಿ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಶಿರಾಳಕೊಪ್ಪದ ಸಿಸಿಟೆಕ್ ಉಪಘಟಕದಡಿಯಲ್ಲಿ "Educational Excellence through Advanced Pedagogy" ಎಂಬ ವಿಷಯದ ಬಗ್ಗೆ ಒಂದು ವಾರದ ಆನ್‌ಲೈನ್ ಅಲಾವದಿ ತರಬೇತಿಯನ್ನು ದಿನಾಂಕ:18-07-2022 ರಿಂದ ದಿ:22-07-2022 ರವರೆಗೆ ನಡೆಸಲು ಅನುಮೋದನೆ ನೀಡಲಾಗಿದೆ.

ಸದರಿ ತರಬೇತಿಯಲ್ಲಿ ಭಾಗವಹಿಸಲು ಇಚ್ಚಿಸುವ ಉಪನ್ಯಾಸಕರು, ತಮ್ಮ ಸಂಸ್ಥೆಯ ಪ್ರಾಚಾರ್ಯರ ಶಿಫಾರಸ್ಸಿನೊಂದಿಗೆ ಅರ್ಜಿ ಸಲ್ಲಿಸಿ, ನೊಂದಾಯಿಸಿಕೊಳ್ಳುವ ಸಲುವಾಗಿ ಸಂಸ್ಥೆಯ ಸಿಸಿಟೆಕ್ ಮ್ಯಾನೇಜರಾದ ಶ್ರೀ ವೀರಣ್ಣ.ಯು, ಮೊಬೈಲ್ ಸಂಖ್ಯೆ: 9380190570 ಇವರುಗಳನ್ನು ಸಂಪರ್ಕಿಸಲು ಸೂಚಿಸಲಾಗಿದೆ. (Brochure ಪ್ರತಿ ಲಗತ್ತಿಸಿದೆ)

ಸದರಿ ಆನ್‌ಲೈನ್ ಅಲಾವದಿ ತರಬೇತಿಯಲ್ಲಿ ಭಾಗವಹಿಸಲು ನೊಂದಾಯಿಸಿಕೊಂಡಿರುವ ಉಪನ್ಯಾಸಕರ ಪಟ್ಟಿಗೆ ದಿನಾಂಕ:12-07-2022ರೊಳಗಾಗಿ ಇಲಾಖೆಯಿಂದ ಕಡ್ಡಾಯವಾಗಿ ಅನುಮೋದನೆ ಪಡೆದು, ತದನಂತರ ತರಬೇತಿಯನ್ನು ಪ್ರಾರಂಭಿಸಲು ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಸಿಡಿಸಿ)

ಇವರಿಗೆ :

1. ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕೆ
2. ಇ-ಆಡಳಿತ ವಿಭಾಗಕ್ಕೆ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು.